ಸಿ.ಸಿ .ನಂ. 574/2018 ಪಿಡಬ್ಲೂಃ 1

ದಿನಾಂಕಃ 14-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

5. ನಾನು 2009 ರಿಂದ 2016 ರವರೆಗೆ ಬೆಂಗಳೂರಿನಲ್ಲಿ ಇದ್ದೆ . ನಮ್ಮ ಊರಿನಲ್ಲಿ ಇನ್ನೊಬ್ಬರು ಕೃಷ್ಣ ಗಾವಡಿ ಎಂಬುವವರು ಇದ್ದರು . ಅವರು ನನ್ನ ಸಹೋದರನ ಸ್ನೇಹಿತರು ಎಂದರೆ ಸಾಕ್ಷಿ ಸುಮಾರು ಆ ಹೆಸರಿನವರು ಇದ್ದಾರೆ ಎಂದು ನುಡಿದಿರುತ್ತಾರೆ . ನನ್ನ ಸಹೋದರನ ಸ್ನೇಹಿತ ಕೃಷ್ಣಾ ಗಾವಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ನನ್ನ ಸಹೋದರಿ ದಾಕ್ಷಾಯಿಣಿ ಇವಳ

ಮದುವೆ 14-15 ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿದ್ದೇವೆ . ನನ್ನ ತಮ್ಮ ತಾನು ವೈಯಕ್ತಿಕವಾಗಿ ದುಡಿದಿರುವ ಹಣವನ್ನು ಕೊಟ್ಟಿರುತ್ತಾನೆ. ಪ್ರಕರಣದ ಬಗ್ಗೆ ನನಗೆ ಮಾತ್ರ ಗೊತ್ತಿತ್ತು , ಕಾರಣ ನನ್ನನ್ನು ಪ್ರಕರಣಕ್ಕೆ ಸೇರಿಸಬೇಕೆಂದು ಅರ್ಜಿ ಕೊಟ್ಟಿದ್ದೆ . ನಾನು ಊರಿಗೆ ಬಂದ ಒಂದು ವರ್ಷಕ್ಕೆ ಪ್ರಕರಣದ ಬಗ್ಗೆ ಗೊತ್ತಾಯಿತು. ಅದಕ್ಕಿಂತ ಮೊದಲು ನಾನು ಬೆಂಗಳೂರಿನಲ್ಲಿದ್ದೆ , ಕಾರಣ ಏನಾಗಿದೆ ಗೊತ್ತಿಲ್ಲ. ಹಣವನ್ನು ನನ್ನ ತಮ್ಮ ಯಾವ ರೀತಿ ಕೊಟ್ಟಿದ್ದ ಗೊತ್ತಿಲ್ಲ . ಚೆಕ್ ನಲ್ಲಿರುವ ಬರವಣಿಗೆ ನನ್ನ ಮುಂದೆ ಆಗಿಲ್ಲ ಎಂದರೆ ಸರಿ . ಚೆಕ್ ನ್ನು ಯಾರು ಬರೆದರು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ . ನನ್ನ ಅಣ್ಣನ ಮೇಲೆ ಮಂಜುನಾಥ ಹರಿಕಂತ್ರ ಒಂದು ಪ್ರಕರಣವನ್ನು ದಾಖಲಿಸಿದ ನಂತರ ನೋಟಿಸನ್ನು ಕೊಟ್ಟಿದ್ದರುಎಂದರೆ ಸರಿ . ಪೋಲಿಸ್ ಠಾಣೆಯಲ್ಲಿ ನನ್ನ ಅಣ್ಣನ ವಿರುದ್ಧ ಫಿರ್ಯಾದನ್ನು ಕೊಡಲು ಕೂಡ ಹೋಗಿದ್ದರು ಎಂದರೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಪೋಲಿಸರು ಇಬ್ಬರನ್ನು ಕರೆಸಿ ವಿಚಾರಣೆ ಮಾಡಿಸಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನ್ನ ಅಣ್ಣ ಸುಳ್ಳು ಪ್ರಕರಣ ದಾಖಲಿಸಿದ್ದು ಹೌದು , ಪ್ರಕರಣವನ್ನು ಮುಂದುವರೆಸುವುದಿಲ್ಲ

ಎಂದು ಮೌಖಿಕವಾಗಿ ಹೇಳಿದ್ದರು ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ನನ್ನ ಅಣ್ಣ ಆರೋಪಿಗೆ ನೋಟಿಸ್ ಕೊಟ್ಟ ಬಗ್ಗೆ ಹೇಳಿದ್ದರು. ನೋಟಿಸನ್ನು ಕೊಟ್ಟ ದಿನಾಂಕ ಗೊತ್ತಿಲ್ಲ . ನೋಟಿಸು ಎಂದರೆ ಯಾವ ತರಹ ಗೊತ್ತಿಲ್ಲ. ನನ್ನ ಅಣ್ಣ ನನಗೆ ಹೇಳಿಲ್ಲ , ಕಾರಣ ನೋಟಿಸು ಯಾವ ತರಹದ್ದು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಅಮೌಂಟ್ ಬರುವುದು ಇದೆ , ನೋಟಿಸು ಕೊಟ್ಟಿದ್ದೇನೆ ಎದು ಅಣ್ಣ ಹೇಳಿದ್ದರು ಎಂದು ನುಡಿದಿರುತ್ತಾರೆ . ಸದರಿ ನೋಟಿಸು ಪೋಸ್ಟ ಮೂಲಕ ಅಥವಾ ಕೋರ್ಟ ಮೂಲಕ ಹೋಟರುವ ನೋಟಿಸಾ ಗೊತ್ತಿಲ್ಲ. ಈ ಪ್ರಕರಣದಲ್ಲಿ ನನ್ನನ್ನು ಸೇರಿಸಬೇಕೆಂದು ಹಾಕಿರುವ ಅರ್ಜಿಯಲ್ಲಿ ನನಗೆ ಪ್ರಕರಣದ ಬಗ್ಗೆ ಗೊತ್ತಿದೆ ಎಂದು ಎಲ್ಲೂ ಹೇಳಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.